ದೂರಶಿಕ್ಷಣ ನಿರ್ದೇಶನಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276, ಹೊಸಪೇಟೆ ತಾಲ್ಲೂಕು, ವಿಜಯನಗರ ಜಿಲ್ಲೆ

ಸಂಖ್ಯೆ:ಕವಿಹಂ:ದೂಶಿನಿ:17:ನಮೂನೆ:2022-23 ದಿನಾಂಕ:22.09.2022

# ಪತ್ರಿಕೋದ್ಯಮ ಅಧ್ಯಯನ ಡಿಪ್ಲೊಮಾ ಕೋರ್ಸ್‌ನ ಗೃಹಲೇಖನ ಪ್ರಶ್ನೆಪತ್ರಿಕೆ 2020-21

*ವಿದ್ಯಾರ್ಥಿಗಳ ಸೂಚನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗಿದೆ. ಅದನ್ನು ಗಮನವಿಟ್ಟು ಓದಿಕೊಂಡು ಈ ಕೆಳಗಿನ ಪ್ರಶ್ನೆಗಳಿಗೆ ಗೃಹಲೇಖನ/ಸಂಪ್ರಬಂಧಗಳನ್ನು ಸಿದ್ಧಪಡಿಸಿ ಸಲ್ಲಿಸಲು ಸೂಚಿಸಿದೆ.*

ಗೃಹಲೇಖನ/ಸಂಪ್ರಬಂಧದ **ವಿಷಯಗಳು** (ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯಗಳ ಕುರಿತು ಕಡ್ಡಾಯವಾಗಿ ಗೃಹಲೇಖನ/ಸಂಪ್ರಬಂಧ ಸಿದ್ಧಪಡಿಸಿ 2 ಸೆಟ್‌ಗಳಲ್ಲಿ ಸಲ್ಲಿಸಬೇಕು.)

## ಕೋರ್ಸ್-26ಎ&08ಎ(ಪತ್ರಿಕೆ) - 1 : ಸಮೂಹ ಮಾಧ್ಯಮಗಳ ಪರಿಚಯ

1. ಭಾರತೀಯ ಭಾಷಾ ಪತ್ರಿಕೋದ್ಯಮದ ಹುಟ್ಟು ಮತ್ತು ಬೆಳವಣಿಗೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.
2. ಕನ್ನಡ ಪತ್ರಿಕೋದ್ಯಮದ ಧೀಮಂತ ಪತ್ರಿಕೋದ್ಯಮರನ್ನು ಪಟ್ಟಿ ಮಾಡಿ, ಯಾರಾದರೂ ಇಬ್ಬರ ಕೊಡುಗೆಯನ್ನು ವಿವರಿಸಿ.
3. ಟೆಲಿವಿಷನ್ ಕೇಂದ್ರದ ಸಾಂಸ್ಥಿಕ ಸಂರಚನೆಯನ್ನು ಚಿತ್ರದೊಂದಿಗೆ ವಿವರಿಸಿ.
4. ಎಫ್.ಎಂ. ಮತ್ತು ಎ.ಎಂ. ರೇಡಿಯೋಗಳ ವ್ಯತ್ಯಾಸಗಳನ್ನು ಸೂಕ್ತವಾದ ಉದಾಹರಣೆಯೊಂದಿಗೆ ವಿವರಿಸಿ.

## ಕೋರ್ಸ್-26ಬಿ&08ಬಿ(ಪತ್ರಿಕೆ) - 2 : ವರದಿಗಾರಿಕೆ

1. ಸುದ್ದಿಯ ಮೂಲಗಳನ್ನು ಪಟ್ಟಿ ಮಾಡಿ ಸುದ್ದಿ ಮೂಲಗಳ ಮಹತ್ವ ಚರ್ಚಿಸಿ ಬರೆಯಿರಿ.
2. ತಲೆಬರಹದ ವಿಧಗಳನ್ನು ತಿಳಿಸಿ, ಸೂಕ್ತ ಉದಾಹರಣೆಯೊಂದಿಗೆ ವಿವರಿಸಿ ಬರೆಯಿರಿ.
3. ಒಬ್ಬ ಪತ್ರಕರ್ತನಿಗೆ ಇರಬೇಕಾದ ಅರ್ಹತೆಗಳನ್ನು ಚರ್ಚಿಸಿ ಬರೆಯಿರಿ.
4. ಸುದ್ದಿಯ ಪ್ರಕ್ರಿಯೆಯನ್ನು ವಿಶ್ಲೇಷಣೆ ಮಾಡಿ.

## ಕೋರ್ಸ್-26ಸಿ&08ಸಿ(ಪತ್ರಿಕೆ) - 3 : ಸುದ್ದಿ ಸಂಪಾದನೆ

1. ಸಂಪಾದಕೀಯ ಎಂದರೇನು? ಒಂದು ಪತ್ರಿಕೆಯ ಸಂಪಾದಕೀಯ ಬರಹದ ಮಹತ್ವವನ್ನು ವಿಶ್ಲೇಷಣೆ ಮಾಡಿ.
2. ದಿನ ಪತ್ರಿಕೆಯೊಂದರಲ್ಲಿ ಉಪ ಸಂಪಾದಕನ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ವಿವರಿಸಿ ಬರೆಯಿರಿ.
3. ಪತ್ರಿಕೆ ಸಂಸ್ಥೆಯ ಸಾಂಸ್ಥಿಕ ರಚನೆಯನ್ನು ಚಿತ್ರದೊಂದಿಗೆ ವಿವರಿಸಿ ಬರೆಯಿರಿ.
4. ಇತ್ತೀಚಿನ ದಿನಗಳಲ್ಲಿ ಪತ್ರಿಕೆಯ ಪುಟ ವಿನ್ಯಾಸದಲ್ಲಿರುವ ಸಮಸ್ಯೆ ಮತ್ತು ಸವಾಲುಗಳನ್ನು ಚರ್ಚಿಸಿ ಬರೆಯಿರಿ.

## ಕೋರ್ಸ್-26ಡಿ&08ಡಿ(ಪತ್ರಿಕೆ) - 4 : ಅಭಿವೃದ್ಧಿ ಪತ್ರಿಕೋದ್ಯಮ

1. ಅಭಿವೃದ್ಧಿ ಸಂವಹನದ ಅರ್ಥ, ವ್ಯಾಪ್ತಿ ಹಾಗೂ ಸ್ವರೂಪವನ್ನು ಕುರಿತು ಬರೆಯಿರಿ.
2. ಅಭಿವೃದ್ಧಿ ಮಾದರಿಗಳು ಯಾವುವು? ಯಾವುದಾದರೂ ಎರಡನ್ನು ಕುರಿತು ಬರೆಯಿರಿ.
3. ರಾಷ್ಟ್ರದ ಅಭಿವೃದ್ಧಿಯಲ್ಲಿ ಸಂವಹನ ಮಾಧ್ಯಮಗಳ ಪಾತ್ರ ಮತ್ತು ಜವಾಬ್ದಾರಿಯನ್ನು ವಿಶ್ಲೇಷಿಸಿ ಬರೆಯಿರಿ.
4. ಒಬ್ಬ ಅಭಿವೃದ್ಧಿ ಪತ್ರಕರ್ತನ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಚರ್ಚಿಸಿ ಬರೆಯಿರಿ.

## ಕೋರ್ಸ್-26ಇ&08ಇ(ಪತ್ರಿಕೆ)-5: ಪತ್ರಿಕೆ ಪ್ರಕಟಣೆ, ನಿಯತಕಾಲಿಕೆ ಪ್ರಕಟಣೆ, ಸಂಪಾದನೆ, ಮೌಖಿಕ ಪರೀಕ್ಷೆ

**ಪತ್ರಿಕೆ ಪ್ರಕಟಣೆ:** ಕೋವಿಡ್-19 ಸಂಕ್ರಾಮಿಕ ರೋಗವನ್ನು ನಿಯಂತ್ರಿಸುವಲ್ಲಿ ಸಾರ್ವಜನಿಕ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಕುರಿತು ಪತ್ರಿಕಾ ಪ್ರಕಟಣೆಯನ್ನು ಸಿದ್ಧಪಡಿಸಿ.

**ನಿಯತಕಾಲಿಕೆ:** ಸ್ವಂತ ನಿಮ್ಮ ಬರಹದಲ್ಲಿಯೇ ಪ್ರಚಲಿತ ವಿದ್ಯಾಮಾನಗಳ ಐದು ಸುದ್ದಿಗಳು, ವಿಶೇಷ ಲೇಖನ, ಫೋಟೋ ಗ್ಯಾಲರಿ, ಮಾನವಾಸಕ್ತಿ ಬರಹಗಳು, ವ್ಯಂಗಚಿತ್ರಗಳನ್ನು ಸಿದ್ಧಪಡಿಸಿ ಪೇಜ್‌ಮೇಕರ್ ಹಾಗೂ ಇನ್ ಡಿಜೈನ್ ತಂತ್ರಾಂಶದ ಮೂಲಕ ಎ4 ಅಳತೆಯ ಹಿಂದೆ ಮತ್ತು ಮುಂದೆ ಪುಟವಿನ್ಯಾಸ ಸಿದ್ಧಪಡಿಸಿ ಕಲರ್ ಪ್ರಿಂಟ್‌ನ್ನು ವಿಭಾಗಕ್ಕೆ ಸಲ್ಲಿಸಬೇಕು.

**ಸಂಪಾದನೆ:** ನಿಮ್ಮ ಊರಿನ ಸುತ್ತಮುತ್ತಲಿನ ಪರಿಸರದಲ್ಲಿ ಕಂಡು ಬರುವ ಸಾಮಾಜಿಕ ಕಳಕಳಿ, ಐತಿಹಾಸಿಕ ಸ್ಥಳಗಳು, ಮಾನವಾಸಕ್ತಿ ವಿಚಾರಗಳು ಹಾಗೂ ವಿಶೇಷ ವಸ್ತು ವಿಷಯಗಳನ್ನು ಒಳಗೊಂಡ ಒಂದು ಹತ್ತು ನಿಮಿಷದ ಸಾಕ್ಷಿಚಿತ್ರಗಳನ್ನು ನಿರ್ಮಾಣ ಮಾಡಿ ಡಿ.ವಿ.ಡಿಯಲ್ಲಿ ಸಂಗ್ರಹಿಸಿ ವಿಭಾಗಕ್ಕೆ ಸಲ್ಲಿಸಬೇಕು.

ವಿಶೇಷ ಸೂಚನೆ: **1. ಸ್ವಂತ ಗ್ರಾಮ ಹಾಗೂ ನಗರವಾಗಿರಬೇಕು.**
**2. ಯಾವುದೇ ಕಾರಣಕ್ಕೂ ನಕಲು ಮಾಡಬಾರದು.**
**3. ನೀವು ಸಿದ್ಧಪಡಿಸುವ ಸಾಕ್ಷಿಚಿತ್ರವು ಈ ಮೊದಲು ಬೇರೆಯಲ್ಲೂ ಪ್ರಸಾರಗೊಂಡಿರಬಾರದು.**

ಮೌಖಿಕ ಪರೀಕ್ಷೆ: ಸಂಪರ್ಕ ತರಗತಿಗಳ ದಿನಗಳಲ್ಲಿ ನಡೆಸಲಾಗುವುದು.

22/9/22
ನಿರ್ದೇಶಕರು
ದೂರಶಿಕ್ಷಣ ನಿರ್ದೇಶನಾಲಯ